# ಕರ್ನಾಟಕ ಲೋಕಾಯುಕ್ತ

ನಂ.ಕಂಪ್ಲೆಂಟ್/ಉಪಲೋಕ್/ಬಿಜಿಎಂ–1055/2016/ಪಿಪಿ

ಬಹುಮಹಡಿಗಳ ಕಟ್ಟಡ,
ಡಾ:ಅಂಬೇಡ್ಕರ್ ವೀಧಿ,
ಬೆಂಗಳೂರು.
ದಿನಾಂಕ : 04/03/2017

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(1) ರನ್ವಯ ವರದಿ

**ವಿಷಯ:** ಶ್ರೀ ವಸಂತ ರಾಮನಗೌಡ ಅಂದಾನಿ, ಹಂದಿಗುಂದ ಗ್ರಾಮ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರು ಈ ಸಂಸ್ಥೆಗೆ ಸಲ್ಲಿಸಿದ ದೂರಿನನ್ವಯ ಕಾನೂನು ರೀತ್ಯ ಕ್ರಮ ಜರುಗಿಸಿ ವರದಿ ಸಲ್ಲಿಸುವ ಬಗ್ಗೆ.

*–*–*

ಪ್ರಕರಣದ ದೂರುದಾರರಾದ ಶ್ರೀ ವಸಂತ ರಾಮನಗೌಡ ಅಂದಾನಿ ಇವರು ಈ ಸಂಸ್ಥೆಗೆ ದೂರೊಂದನ್ನು ಸಲ್ಲಿಸಿ, ಬೆಳಗಾವಿ ಜಿಲ್ಲೆಯ ರಾಯಬಾಗ್ ತಾಲ್ಲೂಕಿನ ಹಂದಿಗುಂದ ಗ್ರಾಮದ ವಾರ್ಡ್ ನಂ.1 ರಲ್ಲಿ ತಾವು ವಾಸವಾಗಿದ್ದು, ತಮ್ಮ ಮನೆಯ ಗೋಡೆಗೆ ಹತ್ತಿರವಾಗಿ ಸಾರ್ವಜನಿಕ ರಸ್ತೆಯಲ್ಲಿ ಶ್ರೀ ಆನಂದ ಕೋರಿಶೆಟ್ಟಿ ಎಂಬುವವರು ತಮ್ಮ ಮನೆಯ ಶೌಚಾಲಯದ ಸೆಪ್ಟಿಕ್ ಟ್ಯಾಂಕ್ ಮತ್ತು ನೀರು ಇಂಗುವ ಗುಂಡಿಯನ್ನು ನಿರ್ಮಿಸುವಾಗ ದೂರುದಾರರು ಗ್ರಾಮ ಪಂಚಾಯತಿಯಲ್ಲಿ ತಕರಾರು ಅರ್ಜಿಯನ್ನು ಸಲ್ಲಿಸಿದ್ದು, ಅದಕ್ಕೆ ಶ್ರೀ ಕೋರಿಶೆಟ್ಟಿಯವರಾಗಲೀ, ಗ್ರಾಮ ಪಂಚಾಯತಿಯವರಾಗಲೀ ಸ್ಪಂದಿಸಿರುವುದಿಲ್ಲ. ಸದರಿ ಶ್ರೀ ಕೋರಿಶೆಟ್ಟಿಯವರು ನಿರ್ಭಯವಾಗಿ ತಮ್ಮ ಶೌಚಾಲಯದ ಕಟ್ಟಡದ ಕಾಮಗಾರಿಯನ್ನು ಮುಂದುವರೆಸಿರುತ್ತಾರೆ. ಅದಾದನಂತರ ದಿ: 19/08/2015 ರಂದು ಮತ್ತು ದಿ:24/08/2015 ರಂದು ಗ್ರಾಮ ಪಂಚಾಯತಿಗೆ ಅರ್ಜಿಗಳನ್ನು ಸಲ್ಲಿಸಿ ತಮ್ಮ ಆಕ್ಷೇಪಣೆಯನ್ನು ವ್ಯಕ್ತಪಡಿಸಿದ್ದರೂ ಸಹ, ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರು ಯಾವುದೇ ರೀತಿಯ ಪ್ರತಿಕ್ರಿಯೆ ನೀಡಿರುವುದಿಲ್ಲ. ಸದರಿ ಶ್ರೀ ಕೋರಿಶೆಟ್ಟಿಯವರು ಶೌಚಾಲಯದ ಕಾಮಗಾರಿಯನ್ನು ಮುಗಿಸಿ ಶೌಚಾಲಯ ಉಪಯೋಗಿಸುತ್ತಿರುತ್ತಾರೆ. ಇದರಿಂದ, ಶೌಚಾಲಯದ ಇಂಗುತೊಟ್ಟಿಯ ನೀರು ದೂರುದಾರರ ಮನೆಯ ಮಣ್ಣಿನ ಗೋಡೆಗೆ ತಾಗಿ ಗೋಡೆ ಬೀಳುವ ಅಪಾಯದಲ್ಲಿರುತ್ತದೆ. ಆದ್ದರಿಂದ, ಸಾರ್ವಜನಿಕ ರಸ್ತೆಯಲ್ಲಿ ಕಟ್ಟಿರುವ ಇಂಗು ತೊಟ್ಟಿಯನ್ನು ತೆರವುಗೊಳಿಸಲು ಎದುರುದಾರರಿಗೆ ನೀಡಿದ ಮನವಿಯನ್ನು ಎದುರುದಾರರು ಇದುವರೆಗೂ ಪರಿಗಣಿಸದೇ ಇರುವ ಪ್ರಯುಕ್ತ, ಇವರ ವಿರುದ್ಧ ಕ್ರಮ ಜರುಗಿಸಬೇಕೆಂದು ಮತ್ತು ತನಗೆ ಉಂಟಾಗಿರುವ ತೊಂದರೆಯನ್ನು ನಿವಾರಿಸಬೇಕೆಂದು

ಕೋರಿಕೊಂಡಿರುತ್ತಾರೆ. ಸದರಿ ದೂರಿನ ಆಧಾರದ ಮೇಲೆ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 9 ರಡಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ತನಿಖೆಗೆ ಆದೇಶಿಸಲಾಗಿರುತ್ತದೆ.

2. ಸದರಿ ದೂರಿನ ಅನ್ವಯ ಎದುರುದಾರರ ಆಕ್ಷೇಪಣೆಯನ್ನು ಕರೆಯಲಾಗಿದ್ದು, ಎದುರುದಾರರಿಗೆ ನೋಟೀಸ್ ಅನ್ನು ದಿ:04/01/2017 ರಂದು ಡಿಸ್ಪ್ಯಾಚ್ ಮಾಡಿದ್ದರೂ, ಸದರಿ ಎದುರುದಾರರಿಗೆ ರವಾನಿಸಿದ ಪತ್ರದ ಸ್ವೀಕೃತಿ ಈ ಕಛೇರಿಯಲ್ಲಿ ಸ್ವೀಕೃತವಾಗಿರುವುದಿಲ್ಲ. ಪತ್ರವನ್ನು ಶ್ರೀ ಶ್ರೀಕಾಂತ್ ಯಡ್ರಾಂವಿ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಹಂದಿಗುಂದ ಗ್ರಾಮ, ರಾಯಬಾಗ್ ತಾಲ್ಲೂಕು, ಬೆಳಗಾವಿ ಜಿಲ್ಲೆ ಇವರಿಗೆ ವಿಳಾಸಿಸಿ ಪತ್ರ ಬರೆದಿದ್ದರೂ ಸದರಿ ಪತ್ರ ಎದುರುದಾರರಿಗೆ ತಲುಪಿರುವ ಬಗ್ಗೆ ಪೋಸ್ಟಲ್ ವೆಬ್‌ಸೈಟ್‌ನಲ್ಲೂ ಸಹ ಮಾಹಿತಿ ದೊರೆತಿರುವುದಿಲ್ಲ. ಆದ್ದರಿಂದ, ಸದರಿ ಎದುರುದಾರರಿಗೆ ಪತ್ರ ರವಾನಿಸಿ ಈಗಾಗಲೇ ಒಂದು ತಿಂಗಳು ಕಳೆದಿರುವುದರಿಂದ, ಸಿಪಿಸಿ ಪ್ರಕಾರ ಸದರಿಯವರಿಗೆ ಪತ್ರ ತಲುಪಿರುವ ಬಗ್ಗೆ ಪರಿಗಣಿಸಿ, ಸದರಿಯವರ ಆಕ್ಷೇಪಣೆ ಏನು ಇಲ್ಲವೆಂದು ಪರಿಗಣಿಸಲಾಗಿದೆ.

3. ದೂರಿನಂಶಗಳನ್ನು ಹಾಗೂ ಪ್ರಕರಣದಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ಪರಿಶೀಲಿಸಿದಲ್ಲಿ, ದೂರುದಾರರು ಪಂಚಾಯತಿ ಅಭಿವೃದ್ಧಿ ಅಧಿಕಾರಿಯವರಿಗೆ ದಿ:04/07/2015, ದಿ:19/08/2015 ರಂದು, ದಿ:24/08/2015 ರಂದು ಪತ್ರಗಳನ್ನು ಬರೆದು, ಹಂದಿಗುಂದ ಗ್ರಾಮದ ವಾರ್ಡ್ ನಂ.1ರ ನಿವಾಸಿಯಾದ ಶ್ರೀ ಆನಂದಕೋರಿಶೆಟ್ಟಿ ಎಂಬುವವರು ಶೌಚಾಲಯ ನಿರ್ಮಾಣ ಮಾಡುವ ಸಲುವಾಗಿ ವಾರ್ಡಿನ ರಸ್ತೆ ಮಧ್ಯದಲ್ಲಿ, ಶೌಚಾಲಯದ ಚರಂಡಿ ಮತ್ತು ನೀರು ಇಂಗುವ ಗುಂಡಿ ನಿರ್ಮಿಸಿ, ಅದರಿಂದ ನೀರು ಹರಿಯಲು ರಸ್ತೆಯ ಮಧ್ಯದಲ್ಲಿರುವ ಘಟಾರಕ್ಕೆ ಪೈಪನ್ನು ಹಾಕಿರುತ್ತಾರೆ. ಇದರಿಂದ, ದೂರುದಾರರಿಗೆ ತೊಂದರೆಯಾಗುತ್ತದೆಂದು, ವಾರ್ಡಿನ ಗಟಾರ ವ್ಯವಸ್ಥೆ ತುಂಬ ಚಿಕ್ಕದ್ದಾಗಿದ್ದು ಮತ್ತು ರಸ್ತೆಯ ಮಧ್ಯದಲ್ಲಿ ಇರುವುದರಿಂದ, ಸದರಿ ಗಟಾರದಲ್ಲಿ ಶೌಚಾಲಯದ ನೀರು ಹರಿಯುವುದರಿಂದ, ಆ ನೀರು ಪ್ರತಿಯೊಬ್ಬರ ಮನೆ ಮುಂದೆ ಹಾದು ಹೋಗುತ್ತದೆ. ಇದರಿಂದ ರೋಗ ರುಜಿನಗಳಿಗೆ ಕಾರಣವಾಗಿರುತ್ತದೆ ಮತ್ತು ದುರ್ವಾಸನೆಯು ಎಲ್ಲ ಕಡೆಗೂ ಹರಡುತ್ತದೆ. ಇದಲ್ಲದೇ, ಸೆಪ್ಟಿಕ್ ಟ್ಯಾಂಕಿನ ನೀರು ಮತ್ತು ಇಂಗು ಚರಂಡಿಯ ನೀರು ದೂರುದಾರರ ಮನೆಯ ಗೋಡೆ ಹತ್ತಿರ ಹರಿಯುವುದರಿಂದ ಮಣ್ಣಿನಿಂದ ನಿರ್ಮಿಸಿರುವ ದೂರುದಾರರ ಮನೆಯ ಗೋಡೆ ನೀರಿನಿಂದ ನೆನೆದು ಕುಸಿಯುವ ಸಂಭವವಿರುತ್ತದೆ. ಆದ್ದರಿಂದ, ಆದಷ್ಟು ಬೇಗ ಸದರಿ ಸಮಸ್ಯೆ ಬಗ್ಗೆ ಗಮನಹರಿಸಿ ಪರಿಹಾರಕೊಡಿಸಬೇಕೆಂದು ಕೋರಿರುವುದು ಕಂಡು ಬರುತ್ತದೆ. ಸದರಿ ಪತ್ರಗಳನ್ನು ಹಾಜರುಪಡಿಸಲಾಗಿದೆ. ಇದಲ್ಲದೇ, ದೂರುದಾರರು ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತಿ, ರಾಯಬಾಗ್ ಇವರಿಗೆ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಳಗಾವಿ ಇವರಿಗೆ ಮತ್ತು ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಪತ್ರಗಳನ್ನು ಬರೆದಿರುವುದು ಕಂಡು ಬರುತ್ತದೆ.

4. ದೂರುದಾರರು ಪಂಚಾಯತಿ ಅಭಿವೃದ್ದಿ ಅಧಿಕಾರಿಯವರಿಂದ ಪತ್ರವನ್ನು ಸ್ವೀಕರಿಸಿದ್ದು, ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಿರುತ್ತಾರೆ. ಸದರಿ ಪತ್ರದಲ್ಲಿ, ಪಂಚಾಯತಿ ಅಭಿವೃದ್ದಿ ಅಧಿಕಾರಿಯವರು ಹಂದಿಗುಂದ ಗ್ರಾಮದ ಶ್ರೀ ಆನಂದ ಮಲ್ಲಪ್ಪ ಕೋರಿಶೆಟ್ಟಿಯವರು ರಸ್ತೆಯನ್ನು ಅಗೆದು ಶೌಚಾಲಯ ಗುಂಡಿಯನ್ನು ನಿರ್ಮಿಸಿಕೊಂಡಿದ್ದು, ಅದನ್ನು ಗ್ರಾಮ ಪಂಚಾಯತಿ ವತಿಯಿಂದ ಸದರಿ ರಸ್ತೆಯ ಮೇಲೆ ಅನಧಿಕೃತವಾಗಿ ನಿರ್ಮಿಸಿಕೊಂಡಿರುವ ಶೌಚಾಲಯದ ಗುಂಡಿಯ ಕನೆಕ್ಷನ್ ಬಂದ್ ಮಾಡಲಾಗಿದೆ ಹಾಗೂ ಬಂದ್ ಮಾಡಿರುವ ಬಗ್ಗೆ ಛಾಯಾಚಿತ್ರಗಳನ್ನು ಲಗತ್ತಿಸಲಾಗಿದೆ ಎಂದು ತಿಳಿಸಿರುತ್ತಾರೆ. ಈ ಪತ್ರಕ್ಕೆ ಸಂಬಂಧಿಸಿದಂತೆ ದೂರುದಾರರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯವರಿಗೆ ಪತ್ರವನ್ನು ಬರೆದು, ಅದರಲ್ಲಿ ಪಿಡಿಓ ರವರು ಇದುವರೆಗೂ ಸೆಪ್ಟಿಕ್ ಟ್ಯಾಂಕ್ ಮತ್ತು ನೀರು ಇಂಗುವ ಚರಂಡಿಯನ್ನು ತೆರವುಗೊಳಿಸದೇ ಶ್ರೀ ಆನಂದ ಕೋರಿ ಶೆಟ್ಟಿ ಮತ್ತು ಸಂಗಡಿಗರ ಪರ ನಿಂತು ಕೆಲಸ ಮಾಡುತ್ತಿರುವುದು ಕಂಡು ಬಂದಿರುತ್ತದೆಂದು, ಸದರಿ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಬೆಳಗಾವಿ ಇವರಿಗೆ ತಿಳಿಸಿರುವುದು ಕಂಡು ಬರುತ್ತದೆ. ಸದರಿ ಪತ್ರದ ಪ್ರತಿಯನ್ನು ಹಾಜರುಪಡಿಸಲಾಗಿದೆ. ಸ್ಥಳದ ಪೋಟೋಗಳನ್ನು ತೆಗೆದು, ಅದರ ಜೆರಾಕ್ಸ್ ಪ್ರತಿಗಳನ್ನು ದೂರುದಾರರು ಸಲ್ಲಿಸಿದ್ದು, ಸದರಿ ಪೋಟೋಗಳ ಜೆರಾಕ್ಸ್ ಪ್ರತಿಯನ್ನು ಹಾಜರುಪಡಿಸಲಾಗಿದೆ.

5. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಲ್ಲಿ ಎದುರುದಾರರಾದ ಪಂಚಾಯತಿ ಅಭಿವೃದ್ದಿ ಅಧಿಕಾರಿಯವರು ಹಂದಿಗುಂದ ಗ್ರಾಮದ ವಾರ್ಡ ನಂ.1ರಲ್ಲಿ ವಾಸವಿರುವ ಶ್ರೀ ಆನಂದ ಮ. ಕೋರಿಶೆಟ್ಟಿಯವರು ಸಾರ್ವಜನಿಕ ರಸ್ತೆಯ ಮಧ್ಯದಲ್ಲಿ ತಮ್ಮ ಮನೆಯ ಶೌಚಾಲಯದ ಇಂಗು ಗುಂಡಿಯನ್ನು ನಿರ್ಮಿಸಿ ಸೆಪ್ಟಿಕ್ ಟ್ಯಾಂಕ್ ನಿಂದ ಸದರಿ ಇಂಗು ಗುಂಡಿಯ ಒಳಗೆ ನೀರು ಹರಿದು ಅಲ್ಲಿಂದ ಶೌಚಾಲಯದ ನೀರನ್ನು ಚರಂಡಿಗೆ ತಲುಪುವಂತೆ ಮಾಡಿರುವುದನ್ನು ತೆರವುಗೊಳಿಸುವ ನಿಟ್ಟಿನಲ್ಲಿ ಯಾವುದೇ ಕ್ರಮ ಕೈಗೊಳ್ಳದೇ ಇರುವುದು ಕಂಡು ಬರುತ್ತದೆ. ಸದರಿ ಶ್ರೀ ಆನಂದಕೋರಿಶೆಟ್ಟಿಯವರು ಶೌಚಾಲಯದ ನೀರನ್ನು ವಾರ್ಡಿನಲ್ಲಿರುವ ಚರಂಡಿಗೆ ಬಿಡುವುದರಿಂದ ಪರಿಸರ ಹಾಳಾಗುವುದಲ್ಲದೇ ರೋಗ ಹರಡಲು ಸಹ ಕಾರಣವಾಗುತ್ತದೆಂಬುದನ್ನು ಪರಿಗಣಿಸದೇ ಮತ್ತು ರಸ್ತೆಯ ಮಧ್ಯದಲ್ಲಿ ನಿರ್ಮಿಸಿರುವ ಶೌಚಾಲಯ ಇಂಗು ಗುಂಡಿ ಮತ್ತು ಸೆಪ್ಟಿಕ್ ಟ್ಯಾಂಕ್ ಅನ್ನು ತೆರವುಗೊಳಿಸಲು ಇದುವರೆಗೂ ಯಾವುದೇ ಕ್ರಮ ಜರುಗಿಸದೇ ಇರುವುದು ಕಂಡು ಬರುತ್ತದೆ.

6. ಮೇಲೆ ಚರ್ಚಿಸಿದ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ, 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, **ಬೆಳಗಾವಿ ಜಿಲ್ಲೆಯ ರಾಯಬಾಗ್ ತಾಲ್ಲೂಕಿನ ಹಂದಿಗುಂದ ಗ್ರಾಮದ ವಾರ್ಡ್ ನಂ.1 ರಲ್ಲಿ ವಾಸವಿರುವ ಶ್ರೀ ಆನಂದಕೋರಿಶೆಟ್ಟಿಯವರು ಸಾರ್ವಜನಿಕ ರಸ್ತೆಯ ಮಧ್ಯದಲ್ಲಿ ಅನಧಿಕೃತವಾಗಿ ನಿರ್ಮಿಸಿರುವ ಇಂಗು ಗುಂಡಿಯನ್ನು ಮತ್ತು ಸೆಪ್ಟಿಕ್**

**ಟ್ಯಾಂಕ್ ಅನ್ನು ತೆರವುಗೊಳಿಸಲು ಹಾಗೂ ಉಂಟಾಗುತ್ತಿರುವ ಪರಿಸರ ಮಾಲಿನ್ಯವನ್ನು ತಡೆಗಟ್ಟಲು ಸೂಕ್ತ ಕ್ರಮ ಜರುಗಿಸುವಂತೆ ಸರ್ಕಾರಕ್ಕೆ ಈ ಮೂಲಕ ಶಿಫಾರಸ್ಸು ಮಾಡಲಾಗಿದೆ.** ಈ ಬಗ್ಗೆ **ಎರಡು ತಿಂಗಳೊಳಗೆ** ಕ್ರಮ ಕೈಗೊಂಡು, ಸಕ್ಷಮ ಪ್ರಾಧಿಕಾರವು ಈ ಸಂಸ್ಥೆಗೆ ಕೈಗೊಂಡ ಕ್ರಮದ ಬಗ್ಗೆ ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(2)ರಡಿಯಲ್ಲಿ ವರದಿ ಸಲ್ಲಿಸುವುದು.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

N. Anand 6/3

(ನ್ಯಾಯಮೂರ್ತಿ ಎನ್.ಆನಂದ)
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ,**
**ಬೆಂಗಳೂರು.** 04/3/17